ತುಮಕೂರು ಡಿಸ್ಟ್ರಿಕ್ಟ್ ಡಿ॥ ಕಮ್ಮಿಷನರ್ ಕೋರ್ಟಿನಿಂದ.

ತಾರೀಖು 26ನೇ ಮೇ 1885.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ, ಡಿ॥ ಮ॥ ಮದ್ದಗಿರಿ, ಪಾವಗಡ, ಪೆರಾ, ಗುಬ್ಬಿ, ತಿಪಟೂರು, ತುಮಕೂರು ಈ ತಾಲ್ಲೂಕುಗಳಲ್ಲಿ ಸ೯ 1885—86ನೇ ಪಾರ್ಥಿವ ಸಂವತ್ಸರದಲ್ಲಿ, ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡಿಲಿ ಕಂಡ ತಾರೀಖುಗಳಲ್ಲಿ, ದಿವಿ 11 ಘಂಟೆ ಲಾಗಾಯಿತು ಹರಾಜು ಮಾಡಲಾಧೀತು.

ಷರತ್ತುಗಳು.

I. ಹರಾಜು ಖೈದಾದ ಕೂಡ್ಲೆ ಆಪ್ಕೆರು ಸವಾಲುದಾರನು ಕೇಕಡಾ 25 ರೂಪಾಯಿ ವೇರಿಗೆ ನಗದು ಶೇವಣೀಯನ್ನು ಇಡಬೇಕು, ಹರಾಜು ದಿವಾಸಾಹೆಬರಿಂದ ಮಂಜೂರಾದ ವಡನೆ, 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ, ಪುನಹ ಹರಾಜು ಮಾಡಲ್ಪಟ್ಟು ನಷ್ಟವಂದ ಮೊಬಲಗಿಗೆ ಮೊದಲಿನ ಚಡಸವಾಲುದಾರನನ್ನು ಗುರಿಮಾಡಲಾಧೀತು ಮತ್ತು ಶೇವಣೀಯನ್ನು ಸರ್ಕಾರಕ್ಕೆ ಶೀರಿಸಿಕೊಳ್ಳಲಾಧೀತು.

2. ಕುರಂಗದಕಲ್ಲುಗಳನ್ನು ತೆಗಿಯುವ ವುದ್ದಿಕ್ಯ ಭೂಮಿ ಸಾಗುವಳೀಗೆ ನಾಲಾಯಕಾಗುವಂತೆ ಮಾಡಕೂಡದು, ಗುಂಡಿಗಳನ್ನು ಇಜಾರೆದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯಲ್ಲಿ ಕುರಂಕದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳೀಗೆ ಕೊಡಲಾಧೀತು, ಹಾಗೆ ಕೊಡೋಣದರಿಂದ ಕುರಂಗದ ಕಲ್ಲು ಇಜಾರೇದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್ದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಕೇಕಡಾ 6—4—0 ರೂಪಾಯಿ ವೇರಿಗೆ ಲೊಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪೇಲು ತಿಳಿಯಬೇಕಾಗಿದ್ದರೆ, ಆಯಾ ತಾಲ್ಲೂಕು ಆಮಿಲರಿಗೆ ಬರದು ತಿಳಕ್ಕೊಳ್ಳಬಹುದು.

ಹರಾಜು ತಾರೀಖು.

ಮದ್ದಗಿರೀ ತಾಲ್ಲೂಕು	ಸ೯ 1885ನೇ ಜುಲೈ	15
ಪಾವಗಡ ತಾಲ್ಲೂಕು	ಡಿಟೋ	26
ಪೆರಾ ತಾಲ್ಲೂಕು	ಡಿಟೋ	25
ಗುಬ್ಬಿ ತಾಲ್ಲೂಕು	ಡಿಟೋ	28
ತಿಪಟೂರು ತಾಲ್ಲೂಕು	ಡಿಟೋ	30
ತುಮಕೂರು ತಾಲ್ಲೂಕು	ಡಿಟೋ	27

ಪಿ. ಯ್ಯರ್. ಕೃಷ್ಣಮೂರ್ತಿ,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ಆರ್ಜೀ ನಂಬರ್ 122.

ವೃತಪಟ್ಟ ಜೇಳೂರು ವೆಂಕಟನಾರಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಚಾಮರಾಜನಗರದ ಕಸಬಾದಲ್ಲಿರುವ ಗವರ್ಮೆಂಟ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ವೆಂಕಟಕೃಷ್ಣಪ್ಪ ವೃತಪಟ್ಟ ಸದರೀ ವೆಂಕಟನಾರಣಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ಕಸಬಾ ಸ್ಥಳದ ಸದರೀ ವೆಂಕಟ್ಟಕೃಷ್ಣಪ್ಪನವರು, ಸದರೀ ಸ್ಥಳದ ವಾಸಸ್ಥರಾಗಿ, ವೃತಪಟ್ಟ ವೆಂಕಟನಾರಣಪ್ಪನವರ ಜೀವದಗಿ ಬ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ವೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಐಯಿಷ್ ಮಾಡಿರುತ್ತಾರ.

ಸದರೀ ದರಖಾಸ್ತುದಾರರಾದ ವೆಂಕಟಕೃಷ್ಣಪ್ಪನವರ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 123.

ಮೃತಪಟ್ಟ ವೀರೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಬಸವೇಗೌಡ ಮೃತಪಟ್ಟ ಸದರೀ ವೀರೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ತಾಲ್ಲೂಕು ಆಲೂರು ಹೋಬಳಿ ದೊಡ್ಡರಾಯಪೇಟೆ ಸ್ಥಳದ ಸದರೀ ಬಸವೇಗವುಡರು, ಸದರೀ ಸ್ಥಳದ ವಾಸಸ್ಥರಾಗಿ ಮೃತಪಟ್ಟ ವೀರೇಗವುಡರ ಜೆಂದಗಿ ಬಾಗ್ಯಾಗಿ ಬರಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವೇಗವುಡರ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರೇಗವುಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 197.

ಮೃತಪಟ್ಟ ಹುಚ್ಚನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಹುಚ್ಚ ಮೃತಪಟ್ಟ ಸದರೀ ಹುಚ್ಚನಿಗೆ ಅಂಣನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಾಗಮಂಗಲ ತಾಲ್ಲೂಕು ದ್ಯಾವಲಾಪುರದ ಹೋಬಳಿ ಬೈಕಿ ಬಿಂಡಪಳ್ಳಿ ಸ್ಥಳದ ಸದರೀ ಹುಚ್ಚನು, ಶ್ರೀರಂಗಪಟ್ಟಣ ವಾಸಸ್ಥನಾಗಿ ಮೃತಪಟ್ಟ ಸದರೀ ಹುಚ್ಚನ ಜೆಂದಗಿ ಬಾಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹುಚ್ಚನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಚ್ಚನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 206.

ಮೃತಪಟ್ಟ ಶ್ರೀನಿವಾಸಾಚಾರ್ಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ರುಕ್ಮಿಣಿಯಮ್ಮ ಮೃತಪಟ್ಟ ಸದರೀ ಶ್ರೀನಿವಾಸಾಚಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ತಿರುಮಕೂಡ್ಲು ನರಸೀಪುರ ತಾಲ್ಲೂಕು ಅಪ್ಪತ್ಯಪುರ ಅಗ್ರಹಾರ ಸ್ಥಳದ ಸದರೀ ರುಕ್ಮಿಣಿಯಮ್ಮ, ಸದರೀ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಾಚಾರ್ರ ಜೆಂದಗಿ ಬ್ಯಾ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುಕ್ಮಿಣಿಯಮ್ಮನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 207.

ಮೃತಪಟ್ಟ ಶ್ಯಾಮಯ್ಯಂಗರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಕುಮಾರ್ದಾ ಜಗತ್ತಯ್ಯಂಗರ ಮಗ ಲಕ್ಷ್ಮಣಯ್ಯಂಗರು ಮೃತಪಟ್ಟ ಸದರೀ ಶ್ಯಾಮಯ್ಯಂಗರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಲಕ್ಷ್ಮಣಯ್ಯಂಗರು, ಸದರೀ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಶ್ಯಾಮಯ್ಯಂಗರ ಜೆಂದಗಿಬಾಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಮಣಿಂಗರ ಅರ್ಜಿಯನ್ನು 1885ನೇ ಇಸವಿ ಜುಲೈ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿ ಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶಿಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ಯಾಮಣಿಂಗರ ಅಸ್ತಿಗೆ ಹಕ್ಕುದಾರರಾದ ವಿಶ್ವೇರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜೂ೯ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಯ೯. ನರಸಿಪ್ಪಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 28ನೇ ಮೇ 1885.

ಮೈಸೂರು ಡಿಸ್ಟ್ರಿಕ್ಟಿನಲ್ಲಿ 1885ನೇ ಇಸವಿ ಜುಲೈ 1ನೇ ಮುಕ್ತಂ ಲಾಗಾಯತು 1886ನೇ ಇಸವಿ ಮಾರ್ಚಿ 31ನೇ ಮುಕ್ತಂವರಿಗೆ ಇದರಡಿ ಕಂಡ ತವಂ ಘಾರೆಸ್ಟುಗಳಿಂದಲಾಗಲಿ ಯಾವದಾದರೊಂದು ಘಾರೆಸ್ಟಿನಿಂದಾಗಲಿ ಅವಗಳ ಬಾಬ್ತಾದಲ್ಲಿ ಕಾಣಿಸಿರುವ ಡಿಪೋಗಳಿಗೆ ನಾಟಾ ಮತ್ತು ಚೌಬೀನೇಗಳನ್ನು ಭಂಡೀ ಮೂಲಕ ಸಾಗಿಸುವ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ:—

ಭಾರಿ ನಾಟಾ.

ಭಂಡಿಪುರ ಘಾರೆಸ್ಟಿನಿಂದ ಮೈಸೂರು ಉಡಿಯೂರಡಿಗೆ.
ಬಾರೆಂಬಾಡಿ ಘಾರೆಸ್ಟಿನಿಂದ ಡಿಟೋ

ಸಣ್ಣ ನಾಟಾ ಮತ್ತು ಚಾಬೀನೆಗಳು.

ಭಂಡಿಪುರ ಸ್ಟೇಟ್ ಘಾರೆಸ್ಟಿನಿಂದ	..	ಹಂಗಲದ ಡಿಪೋಗೆ ಗುಂಡಲ್‌ಪೇಟೆ ಡಿಟೋ
ಬಾರೆಂಬಾಡಿ ಡಿಟೋ		ಮದ್ದೂರು ಡಿಪೋಗೆ ಗುಂಡಲ್‌ಪೇಟೆ ಡಿಟೋ
ಮೆತ್ತಿಕುಪ್ಪೆ ಡಿಟೋ	..	ಅಂತರಸಂತೆ ಡಿಟೋ

ಯಲ್ಲ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವಗೈರೆಗಳನ್ನು ಘಾರೆಸ್ಟುಗಳಿಂದ ಡಿಪೋಗಳಿಗೆ ಭಂಡೀ ಮೂಲಕ ಸಾಗಿಸುವ ಬಗ್ಗೆ ದರಖಾಸ್ತು" ಯೆಂಬ ಮಾತುಗಳು ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

ಮೇಲ್ಕಂಡ ದರಖಾಸ್ತುಗಳು, ಮೈಸೂರು ಡಿಸ್ಟ್ರಿಕ್ಟು ಘಾರೆಸ್ಟು ವ ಗವರ್ಮೆಂಟ್ ಘಾರಂಗಳ ಸೂಪರ್‌ಟೆಂಡೆಂಟರವರಿಂದ 1885ನೇ ಇಸವಿ ಜೂ೯ 20ನೇ ಮುಕ್ತಂ ವರಿಗೆ ತೆಗದುಕೊಳ್ಳಲ್ಪಡುವವು ಮತ್ತು ಸದರೀ ತಾರೀಖಿನಲ್ಲಿ ಅವು ಫೈಸಲ್ಮಾಡಲ್ಪಡುವವು.

ವುದ್ದೇಸುವ ಕಂಟ್ರಾಕ್ಟುದಾರರು ಮೇಲ್ಕಂಡ ಘಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ಕಾಣಿಸಿರುವ ಡಿಪೋಗಳಿಗೆ ನಾಟಾ ಮತ್ತು ಚೌಬೀನೆಗಳನ್ನು ಯಾವ ಕಮ್ಮಿದರಗಳಿಗೆ ಭಂಡೀ ಮೂಲಕ ಸಾಗಿಸುತ್ತಾರೋ ಅಂಥಾ ಕಮ್ಮೀ ದರಗಳನ್ನು ನಮೂದಿಸತಕ್ಕದ್ದು.

ಹಾಲಿ ಜಾರಿಯಲ್ಲಿರುವ ಜಾಸ್ತಿ ದರಗಳ ಪ್ರಕಾರವೇ ಸಾಗಿಸಲ್ಪಡುವ ಬಗ್ಯಾಗಿ ಬರುವ ಯಲ್ಲಾ ದರಖಾಸ್ತುಗಳೂ ತಿರಸ್ಕರಿಸಲ್ಪಡುವವು. ಯಾವ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥಾ ಕಂಟ್ರಾಕ್ಟುದಾರನು ಜುಲೈ ಗುರ್ತೆ ತಾರೀಖು ವಳಗಾಗಿ 300 ರೂಪಾಯಿಗಳನ್ನು ಜಾಮೀನ್ ತರೀಕೆ ಖಜಾನೆಯಲ್ಲಿ ಡಿಪಾಜಿಟ್ ಇಡತಕ್ಕದ್ದು.

ಹಾಲಿ ಜಾರೀಲಿ ಇರುವ ದರಗಳ್ಯಾವವೆಂದರೆ:—

	ರೂ.	ಆ.	ಪೈ.
ಫೀನ ಅಡಿ 50ಕ್ಕೆ ಮೇಲ್ಪಟ್ಟ ನಾಟಾಕ್ಕೆ—ಭಂಡಿಪುರ ಮತ್ತು ಬಾರೆಂಬಾಡಿ ಘಾರೆಸ್ಟುಗಳಿಂದ ಮೈಸೂರು ವುಡೆಯಾರಡಿಗೆ ಫೀನ ಅಡಿ 1ಕ್ಕೆ	0	8	0
ಫೀನ ಅಡಿ 50ಕ್ಕೆ ಕೀಳ್ಪಟ್ಟ ನಾಟಾಕ್ಕೆ—ಭಂಡಿಪುರ ಮತ್ತು ಬಾರೆಂಬಾಡಿ ಘಾರೆಸ್ಟುಗಳಿಂದ ಮೈಸೂರಿಗೆ ಡಿಟೋ	0	6	0
ಸಣ್ಣ ನಾಟಾಗಳು ಮತ್ತು ಚಾಬೀನೆಗಳು—ಭಂಡಿಪುರದಿಂದ ಹಂಗಲಕ್ಕೆ ಮತ್ತು ಬಾರೆಂಬಾಡಿಯಿಂದ ಮದ್ದೂರು ಡಿಪೋಗಳಿಗೆ ಭಂಡಿ ಬೋಜೆ 1ಕ್ಕೆ	1	8	0